ಖಾಲಿ ಕಾಗದದಲ್ಲಿಯೂ ಕೂಡ ಅರ್ಜಿಯನ್ನು ಕೊಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಆದ್ದರಿಂದ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿ ಇವರಿಗೆ ಬೇಕಾದಂತಹ ಅರ್ಜಿಗಳು ಸಿಗಬೇಕು ಮತ್ತು ನಮ್ಮ ತಾಲ್ಲೂಕು ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು ಯಾರಿದ್ದಾರಲ್ಲಾ ಅವರನ್ನೇ ನೊಡಲ್ ಆಫೀಸರ್‌ನ್ನಾಗಿ ಮಾಡಿದ್ದೇವೆ.

ಗೊಂದಲ

ಶ್ರೀ ಸಿ. ಚೆನ್ನಿಗಪ್ಪ : ಬೇರೆಯವರಿಗೂ ಸಿಗುವಂತೆ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಆಯಿತು, ಪರಿಶೀಲನೆ ಮಾಡುತ್ತೇನೆ. ನೀವು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ, ಪ್ರತಿಯೊಂದು ತಾಲ್ಲೂಕಿಗೂ ನಾನು ಮಾಡಿರುವ ನೆನಪಿದೆ. ತಾಲ್ಲೂಕು ಮಟ್ಟದಲ್ಲಿ ಒಂದು ಸಮಿತಿ ಮಾಡುವ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಕೈಗಾರಿಕೆ ಆರಂಭಿಸಲು ಏಕ ಗವಾಕ್ಷಿ ಯೋಜನೆ

624 (5387) : ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೈಗಾರಿಕೆಯನ್ನು ಆರಂಭಿಸಲು ಯಾವ ಯಾವ ಇಲಾಖೆಗಳಿಂದ ಅನುಮತಿ ಪಡೆಯಬೇಕು?

ಆ) ಕೈಗಾರಿಕೆಗಳು ನಡೆಸಬೇಕಾದರೆ ಯಾವ ಯಾವ ಇಲಾಖೆಗಳ ತಪಾಸಣೆಗೆ ಒಳಪಡಬೇಕು?

ಇ) ಕೈಗಾರಿಕೆ ಮುಚ್ಚುವಂತಹ ಪರಿಸ್ಥಿತಿಯಲ್ಲಿ ಎಷ್ಟು ಇಲಾಖೆಗಳ ಅನುಮತಿ ಪಡೆಯಬೇಕು?

ಈ) ಕೈಗಾರಿಕೆಗಳನ್ನು ಆರಂಭಿಸಲು ಏಕ ಗವಾಕ್ಷಿ ಯೋಜನೆಯಂತೆ ಮುಚ್ಚುವ ಅನಿವಾರ್ಯತೆ ಬಂದಲ್ಲಿ ಮುಚ್ಚಲು ಏಕಗವಾಕ್ಷಿ ಯೋಜನೆ ತರಲಾಗುವುದೇ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಅ) ಘಟಕಗಳು ಉತ್ಪಾದಿಸುವ ವಸ್ತುಗಳ ಮತ್ತು ಆ ವಸ್ತುಗಳನ್ನು ತಯಾರಿಸಲು ಉಪಯೋಗಿಸುವ ರೀತಿ ಅನುಸಾರವಾಗಿ ಈ ಕೆಳಕಂಡ ಅನುಮೋದನೆಗಳನ್ನು ಸಾಮಾನ್ಯವಾಗಿ ಪಡೆಯಬೇಕಾಗಿರುತ್ತದೆ.

1. ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಘಟಕ ಸ್ಥಾಪಿಸಲು ಒಪ್ಪಿಗೆ ಪತ್ರ.
2. ಘಟಕವನ್ನು ಪ್ರಾರಂಭಿಸುವ ಮುನ್ನ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಮದ ಒಪ್ಪಿಗೆ ಪತ್ರ.
3. ಕೈಗಾರಿಕೆ ಅಧಿನಿಯಮ 1948 ರನ್ವಯ ಮಂಜೂರಾತಿ.
4. ಘಟಕದಲ್ಲಿ ಬಾಯ್ಲರ್ ಅಳವಡಿಸಿದಲ್ಲಿ ಬಾಯ್ಲರ್ ಅಧಿನಿಯಮದ ಪ್ರಕಾರ ಮಂಜೂರಾತಿ.
5. ಪೆಟ್ರೋಲ್ ಉತ್ಪನ್ನಗಳನ್ನು ಶೇಖರಿಸಲು ಎಕ್ಸ್‌ಪೋಸಿವ್ ಅಧಿನಿಯಮದ ಪ್ರಕಾರ ಪರವಾನಿಗೆ.
6. ಕಾರ್ಮಿಕ ಶಾಸನದಂತೆ ಕಾರ್ಮಿಕ ಇಲಾಖೆಯಿಂದ ವಿವಿಧ ರೀತಿಯ ನೋಂದಣಿಗಳು.

7. ಸ್ಥಳೀಯ ಸಂಸ್ಥೆಗಳಿಂದ ಕೈಗಾರಿಕಾ ಕಟ್ಟಡ ಕಟ್ಟಲು ಅನುಮೋದನೆ.
8. ತೂಕ ಮತ್ತು ಅಳತೆ ಇಲಾಖೆಯಿಂದ ಪರವಾನಿಗೆ ಮತ್ತು ಮುಂತಾದವುಗಳು.

ಆ) ಸಂಬಂಧಪಟ್ಟ ಇಲಾಖೆಗಳೆಂದರೆ :

1. ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ.
2. ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ.
3. ಕಾರ್ಖಾನೆ ಮತ್ತು ಬಾಯ್ಲರ್ ನಿಯಂತ್ರಣ ಇಲಾಖೆ.
4. ಸ್ಫೋಟಕಗಳ ಮುಖ್ಯ ನಿಯಂತ್ರಣಾಧಿಕಾರಿಗಳ ಇಲಾಖೆ.
5. ಕಾರ್ಮಿಕ ಇಲಾಖೆ.
6. ನಗರಾಭಿವೃದ್ಧಿ ಇಲಾಖೆ.
7. ತೂಕ ಮತ್ತು ಅಳತೆ ಮಾಪನ ಇಲಾಖೆ.

ಇ) ಕೈಗಾರಿಕೆ ಘಟಕಗಳು ಮುಚ್ಚುವ ಸಂದರ್ಭದಲ್ಲಿ ಈ ಕೆಳಕಂಡ ರಚನೆಗೆ ತಕ್ಕಂತೆ ಕೆಳಕಂಡ ಪರವಾನಿಗೆ ಮತ್ತು ಮಂಜೂರಾತಿ ಪಡೆಯಬೇಕಾಗಿರುತ್ತದೆ.

1. ಘಟಕದಲ್ಲಿ 100 ಕ್ಕೂ ಹೆಚ್ಚು ಉದ್ಯೋಗಿಗಳಿದ್ದಲ್ಲಿ ಪ್ರಕರಣ 25(0) ಇಂಡಸ್ಟ್ರೀಯಲ್ ಡಿಸ್‌ಪ್ಯೂಟ್ ಆಕ್ಟ್ ರೀತಿಯಲ್ಲಿ ಕಾರ್ಮಿಕ ಇಲಾಖೆಯಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ.
2. ಇಂಡಸ್ಟ್ರೀಯಲ್ ವ್ಯಾಜ್ಯ ಅಧಿನಿಯಮ ಪ್ರಕರಣ 25(ಎಫ್ ಅಂಡ್ ಜಿ) ಪ್ರಕಾರ ಘಟಕವು ಕಾರ್ಮಿಕರಿಗೆ ಸಂಬಳ ಮತ್ತು ಇತರೆ ಬಾಕಿ ಭತ್ಯೆಗಳನ್ನು ಚುಕ್ತ ಮಾಡುವುದು.
3. ಗ್ರಾಚ್ಯುಟಿ ಪಾವತಿ ಕಾಯಿದೆ 1970 ರಂತೆ ನೌಕರರಿಗೆ ಗ್ರಾಚ್ಯುಟಿ ನೀಡಲಾಗುತ್ತಿದೆ.
4. ಘಟಕವು ಮಾರಾಟ ತೆರಿಗೆ, ಪ್ರವೇಶ ತೆರಿಗೆ, ಆದಾಯ ತೆರಿಗೆ, ಕೇಂದ್ರೀಯ ಅಬಕಾರಿ ಶುಲ್ಕ ಮತ್ತಿತರ ತೆರಿಗೆ ಸಂಬಂಧಿಸಿದ ಇಲಾಖೆಗಳಿಗೆ ಬಾಕಿ ತೆರಿಗೆಯನ್ನು ಪಾವತಿಸಬೇಕಾಗಿದೆ.
5. ಘಟಕವನ್ನು ಸ್ಥಗಿತಗೊಳಿಸುವ ಮುನ್ನ ಹಣಕಾಸು ಸಂಸ್ಥೆಗಳಿಗೆ ಮತ್ತು ಬ್ಯಾಂಕ್‌ಗಳಿಗೆ ನೀಡಬೇಕಾಗಿರುವ ಬಾಕಿ ಮೊತ್ತವನ್ನು ಸಹ ಪಾವತಿಸಬೇಕಾಗಿದೆ.
6. ಸಂಡ್ರಿ ಕ್ರೆಡಿಟರ್ಸ್‌ಗಳಿಗೆ ಬಾಕಿ ಪಾವತಿ.
7. ಇ.ಎಸ್.ಐ. ಭವಿಷ್ಯನಿಧಿ ಕಾಯಿದಿಗಳಡಿ ಮತ್ತು ಇನ್ನಿತರ ಶಾಸನಗಳಡಿ ಪಾವತಿಸಬೇಕಾದ ಮೊತ್ತ.

ಈ) ಕೈಗಾರಿಕೆಗಳನ್ನು ಸ್ಥಗಿತಗೊಳಿಸಲು:ಮುಚ್ಚಲು ಏಕ ಗವಾಕ್ಷಿ ಪದ್ಧತಿಯನ್ನು ಪ್ರಾರಂಭಿಸಲು ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. ಏಕೆಂದರೆ ಕೈಗಾರಿಕೆಗಳು ಮುಚ್ಚಲು ಇರುವ ಕಾರಣಗಳು ಒಂದೇ ತರವಾಗಿ ಇರದೆ ಇರುವುದರಿಂದ ನಿಗಧಿತ ನಿಯಮಾವಳಿಗಳನ್ನು ನಿಗಧಿಪಡಿಸುವುದು ಸಾಧ್ಯವಿರುವುದಿಲ್ಲ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಉಪಾಧ್ಯಕ್ಷರೆ, ಕೈಗಾರಿಕೆಗಳನ್ನು ಆರಂಭಿಸಲು ಯಾವ್ಯಾವ ಇಲಾಖೆಗಳಿಂದ ಅನುಮತಿಯನ್ನು ಪಡೆಯಬೇಕು ಎಂದು ಕೇಳಿದಾಗ ಸುಮಾರು 8

ಇಲಾಖೆಗಳ ಬಗ್ಗೆ ಉಲ್ಲೇಖ ಮಾಡಿದಿರಿ. ಒಬ್ಬ ವಿದ್ಯಾವಂತ ಯುವಕ ಸ್ವಾವಲಂಬಿಯಾಗಿ ಒಂದು ಸ್ವಯಂ ಉದ್ಯೋಗವನ್ನು ಆರಂಭಿಸಬೇಕೆಂದು ಹೊರಟಾಗ ನನ್ನ ಲೆಕ್ಕಾಚಾರದಲ್ಲಿ ಎಂಟು ಇಲಾಖೆ ಮಾತ್ರವಲ್ಲ, ಇಪ್ಪತ್ತು ಅದಕ್ಕಿಂತ ಹೆಚ್ಚು ಇಲಾಖೆಗಳನ್ನು ಕಾಂಟಾಕ್ಟ್ ಮಾಡಬೇಕಾಗುತ್ತದ. ಎಕ್ಸೈಸ್‌ನಿಂದ ಹಿಡಿದು, ಕೆ.ಪಿ.ಟಿ.ಸಿ.ಎಲ್‌ನಿಂದ ಹಿಡಿದು ಬೇರೆ ಎಲ್ಲಾ ಲೆಕ್ಕಕ್ಕೆ ಬರುತ್ತದೆ. ಇಂತಹ ಸಂದರ್ಭದಲ್ಲಿ ತಾವು ಏಕ ಗವಾಕ್ಷಿ ಮೂಲಕ ಕೊಡುವಂತಹ ವ್ಯವಸ್ಥೆಯಲ್ಲಿ ಎಷ್ಟು ಸಮಯದೊಳಗೆ ಅವರು ಅರ್ಜಿಯನ್ನು ಹಾಕಿದ ನಂತರ, ಬೇಕಾದ ಎಲ್ಲಾ ಮಾಹಿತಿಯನ್ನು ಪಡೆದು ಸಂಪೂರ್ಣವಾಗಿ ಬೇಕಾಗುವಂತಹ ಮಾಹಿತಿಯಲ್ಲವನ್ನೂ ಭರ್ತಿ ಮಾಡಿದ ನಂತರ ಏನೆಲ್ಲ ಬೇಕು ಎಲ್ಲವನ್ನೂ ಮಾಡಿದ ನಂತರ ಎಷ್ಟು ಸಮಯದೊಳಗೆ ಅವರಿಗೆ ಅನುಮತಿ ಸಿಗುತ್ತದೆ ಎಂಬುದನ್ನೂ ಹೇಳಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಕಳೆದ ಎರಡು ದಿವಸಗಳ ಹಿಂದೆ ಮಾನ್ಯ ಸದಸ್ಯರೆಲ್ಲರೂ ಒಂದು ಕಾಯ್ದೆಗೆ ಅನುಮತಿಯನ್ನು ಕೊಟ್ಟಿದ್ದೀರಿ, ಆ ಕಾಯ್ದೆಯಂತೆ ನಾವು ರೂಲ್‌ನಲ್ಲಿ ಪ್ರಾವಿಷನ್ ಮಾಡುತ್ತಿದ್ದೇವೆ. ಒಂದು ಪ್ರಾಜೆಕ್ಟ್ ಕೊಟ್ಟ ನಂತರ 35 ದಿವಸದೊಳಗೆ ಅದು ಕ್ಲಿಯರ್ ಆಗಬೇಕು. ಆ 35 ದಿವಸದೊಳಗೆ ಅದು ಕ್ಲಿಯರ್ ಆಗಲಿಲ್ಲವೆಂದರೆ ನೀವು ಎಲ್ಲಾ ಕಾಯ್ದೆಯಂತೆ ಅಪ್ಲೈ ಮಾಡಿದ್ದರೆ it will be deemed cleared within 35 days. ಈ ವ್ಯವಸ್ಥೆಯನ್ನು ಈ ಕಾಯ್ದೆಯಲ್ಲಿ ರೂಲ್ಸ್ ಮಾಡುತ್ತಿದ್ದೇವೆ. ಹಾಗಾಗಿ ಮುಖ್ಯವಾಗಿ ಅತಿ ಚಿಕ್ಕ ಕೈಗಾರಿಕೆಗಳಲ್ಲಿ ಸಣ್ಣ ಕೈಗಾರಿಕೆಗಳು ಏನಿವೆ ಅವುಗಳಿಗೆ ಇದರಿಂದ ಹೆಚ್ಚು ಲಾಭವಾಗಬಹುದು. ತಾವು ಹೇಳಿದ ಹಾಗೆ ನಾನು ಒಪ್ಪಿಕೊಳ್ಳುತ್ತೇನೆ. ಸಿಂಗಲ್ ವಿಂಡೋ ಏಜೆನ್ಸಿಯಿಂದ ಪ್ರಾಜೆಕ್ಟ್ ಕ್ಲಿಯರ್ ಆದರೂ ಸಹ pillar to post ಓಡಬೇಕಾಗುತ್ತದೆ. ಕಷ್ಟವಿದೆ. ಹಾಗಾಗಿ ಅದಷ್ಟು ಸರಳೀಕರಣ ಹಾಗೂ ಪಾರದರ್ಶಕತೆ ತರಬೇಕು ಎನ್ನುವ ದೃಷ್ಟಿಯಿಂದ ಆ ವ್ಯವಸ್ಥೆಯನ್ನು ಆ ಮಸೂದೆಯಲ್ಲಿ ಹಾಗೂ ರೂಲ್ಸ್‌ನಲ್ಲಿ ಈಗಾಗಲೇ ನಾವು ಮಾಡಿದ್ದೇವೆ.

ಶ್ರೀ ಎನ್. ಯೋಗೀಶ್‌ಭಟ್ : ಕೈಗಾರಿಕೆಗಳನ್ನು ಮುಚ್ಚುವಂತಹ ಪರಿಸ್ಥಿತಿಯಲ್ಲಿ ಎಷ್ಟು ಇಲಾಖೆಗಳ ಅನುಮತಿಯನ್ನು ಪಡೆಯಬೇಕೆಂದು ಇನ್ನೊಂದು ಪ್ರಶ್ನೆಯನ್ನು ಕೇಳಿದ್ದೆನು ನನ್ನ ಕ್ಷೇತ್ರದಲ್ಲಿರುವಂತಹ ಸುಮಾರು ಶೇಕಡ 60 ಸಣ್ಣ ಕೈಗಾರಿಕೆಗಳು ಇವತ್ತು ಮುಚ್ಚುವಂತಹ ಸ್ಥಿತಿಯಲ್ಲಿ ಇವೆ. ಸಾಕಷ್ಟು ನಷ್ಟವನ್ನು ಅನುಭವಿಸುತ್ತಿವೆ. ಬರಬೇಕಾದ ಸಬ್ಸಿಡಿ ಬಂದಿಲ್ಲ ಇನ್ನೂ ಅನೇಕ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿವೆ. ಇಂತಹ ಸಂದರ್ಭದಲ್ಲಿ ಅವರು ಒಂದು ಬೇಡಿಕೆಯನ್ನು ಇಡುವಂತಹದು ಇದೆ. ಯಾರು ಆರ್ಥಿಕವಾಗಿ ಸ್ವಲ್ಪ ಸಶಕ್ತರಿದ್ದರೆ, ಅವರಿಗೆ ಇದನ್ನು ಮಾರಾಟ ಮಾಡಿ, ಇನ್ನೊಂದು ಉದ್ಯೋಗವನ್ನು ಆರಂಭಿಸೋಣ ಎಂದರೆ ಈ ಕ್ಲಚ್‌ಗಳಿಂದ ಹೊರಗೆ ಬರಲಿಕ್ಕೆ ಸಾಧ್ಯವೇ ಇಲ್ಲ. ಯಾವಾಗ ಅದು ಕ್ಲಿಯರ್ ಆಗುವುದಿಲ್ಲ. ಇನ್ನೊಬ್ಬರು ಅದನ್ನು ತಎಗೆದುಕೊಳ್ಳಲಿಕ್ಕೆ ಹೋಗುವುದಿಲ್ಲ. ಇಂತಹ ಒಂದು ದುಸ್ಥಿತಿಯಲ್ಲಿ ಕೊನೆಗೆ ಅವರಿಗೆ ಆತ್ಮಹತ್ಯೆಯನ್ನು ಬಿಟ್ಟರೆ ಬೇರೇನೂ ಕಾಣುವುದಿಲ್ಲ. ಆತ ಊರು ಬಿಟ್ಟು ಹೋಗುವಂತಹ ಸ್ಥಿತಿ ಬಂದಿದೆ. ಈ ನಿಟ್ಟಿನಲ್ಲಿ ಏನಾದರೊಂದು ಪರಿಹಾರವನ್ನು ಯಾವರೀತಿ ಕೈಗಾರಿಕೆಯನ್ನು ಆರಂಭ ಮಾಡುವಾಗ ಏಕ ಗವಾಕ್ಷಿ ಎಂದು ತಾವು ಯೋಚನೆಯನ್ನು ಮಾಡುತ್ತಿದ್ದೀರಿ, ಇಂತಹ ಸಂದರ್ಭದಲ್ಲಿ ಕೂಡ ಅವರ ತುರ್ತು ಪರಿಸ್ಥಿತಿಗೆ ನೆರವಿಗೆ ಬರುವಂತಹ ನಿಟ್ಟಿನಲ್ಲಿ ಏಕೆಂದರೆ ಅವರ ಕೈಗಾರಿಕೆಗಳು ನಡೆಯುವಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ತೆರಿಗೆಯನ್ನು ನೀಡುವಂತಹದ್ದನ್ನು ಬಿಟ್ಟರೆ ಯಾವುದೇ ಒಂದು ನಯಾ

ಪೈಸೆಯನ್ನು ಅಪೇಕ್ಷೆಪಟ್ಟಿರುವುದಿಲ್ಲ. ಅಂತಹ ಸಂದರ್ಭದಲ್ಲಿ ಕೂಡ ಅವರ ಜೀವನವನ್ನು ನಡೆಸುವುದಕ್ಕೋಸ್ಕರ, ಅನಿವಾರ್ಯವಾಗಿ ನಷ್ಟವಾಗಿರುವಂತಹ ಸಂದರ್ಭದಲ್ಲಿ ಮಾರಾಟ ಮಾಡುವಂತಹ ಹಂತದಲ್ಲೂ ಕೂಡ ಏನಾದರೊಂದು ಏಕ ಗವಾಕ್ಷಿ ಮೂಲಕ ಸಹಾಯವನ್ನು ಮಾಡಬಹುದೆನ್ನುವ ವಿನಂತಿಯನ್ನು ನಮ್ಮಲ್ಲಿ ಮಾಡಿದ್ದಾರೆ. ಅದಕ್ಕೆ ಪರಿಹಾರವೇನು ಎಂದು ತಮ್ಮಲ್ಲಿ ಕೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮುಖ್ಯವಾಗಿ ಕೈಗಾರಿಕೆಗಳು ಅನಾರೋಗ್ಯ ಆಗಬಾರದೆಂದು ಸರ್ಕಾರದ ಉದ್ದೇಶವಿದೆ. ಎರಡನೆಯದಾಗಿ ಇವತ್ತು 50 ರಿಂದ 60 ಪರ್ಸೆಂಟ್ ಕೈಗಾರಿಕೆಗಳು ಅನಾರೋಗ್ಯದಲ್ಲಿವೆ ಎಂದು ಒಪ್ಪಲಿಕ್ಕೆ ಸಿದ್ಧವಿಲ್ಲ. ಇವತ್ತಿನ ಕಾಂಪಿಟೇಷನ್ ವಾತಾವರಣದಲ್ಲಿ ಕೆಲವು ಕಡೆ ಸಣ್ಣ ಕೈಗಾರಿಕೆಗಳಿಗೆ ತೊಂದರೆಯಾಗಿದೆ. ಆದರೆ ಮುಖ್ಯವಾಗಿ ಸಣ್ಣ ಕೈಗಾರಿಕೆಗಳು ಅನಾರೋಗ್ಯವಾಗಿರುವಂಥದ್ದಕ್ಕೆ ಸರ್ಕಾರ ಒಂದು ಹೊಸ ನಿಧಿಯನ್ನು ತಂದಿದೆ. ಮುಂಚೆ ದೊಡ್ಡ ಕೈಗಾರಿಕೆಗಳು ಅನಾರೋಗ್ಯವಾದಾಗ When they have lost their assets net-worth BIFRನಲ್ಲಿ ರಿಜಿಸ್ಟರ್ ಆಗುತ್ತಿತ್ತು. ಅವರಿಗೆ ಸೇಲ್ಸ್ ಟ್ಯಾಕ್ಸ್ ಡಿಫರ್‌ಮೆಂಟ್, ಕೆ.ಪಿ.ಟಿ.ಸಿ.ಎಲ್. ಡಿಫರ್‌ಮೆಂಟ್ ಸಿಗುತ್ತಿತ್ತು. ಈಗ ದೇಶದಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಮೊದಲಿಗೆ ಸಣ್ಣ ಕೈಗಾರಿಕೆಗಳಿಗೆ ಆ ಪ್ರಾವಿಷನ್ ಕೊಟ್ಟಿದ್ದೇವೆ. ಸಣ್ಣ ಕೈಗಾರಿಕೆಗಳು ಅನಾರೋಗ್ಯವಾದಾಗ ಅವರು ರಿಸರ್ವ್ ಬ್ಯಾಂಕ್ ಗೈಡ್‌ಲೈನ್ಸ್‌ನಲ್ಲಿ ಬರುವುದಿದ್ದರೆ ಜಿಲ್ಲಾಧಿಕಾರಿಗಳ ಮುಖಾಂತರ ಅವರ ಪ್ರಪೋಸಲ್ ಸರ್ಕಾರಕ್ಕೆ ಬಂದರೆ we will revive that industry. ಸೇಲ್ಸ್ ಟ್ಯಾಕ್ಸ್ ಡಿಫರ್‌ಮೆಂಟ್, ಕೆ.ಪಿ.ಟಿ.ಸಿ.ಎಲ್. ಡಿಫರ್‌ಮೆಂಟ್ ಮಾಡುವ ವ್ಯವಸ್ಥೆಯನ್ನು ನಾವು ಈಗಾಗಲೇ ಮಾಡಿದ್ದೇವೆ. ಅದರ ಲಾಭವನ್ನು ಕೈಗಾರಿಕೆಗಳು ತೆಗೆದುಕೊಳ್ಳಲಿಕ್ಕೆ ಪ್ರಾರಂಭ ಮಾಡಿವೆ. ಇನ್ನೂ ಹೆಚ್ಚು ಸಣ್ಣ ಕೈಗಾರಿಕೆಗಳು ಇದರ ಲಾಭವನ್ನು ಪಡೆಯಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ಕೈಗಾರಿಕೆಗಳನ್ನು ಮುಚ್ಚುವಾಗ ಕೆಲವು ಆಬ್ಲಿಗೇಷನ್ಸ್ ಇರುತ್ತವೆ. ಲೇಬರ್ ಪೇಮೆಂಟ್, ಗ್ರಾಚ್ಯುಯಿಟಿ, ಪ್ರಾವಿಡೆಂಟ್ ಫಂಡ್ಸ್ ಇರುತ್ತದೆ, ಇ.ಎಸ್.ಐ. ಬ್ಯಾಂಕ್ ಸಾಲಗಳಿರುತ್ತವೆ, ಕಾಮನ್ ಡ್ಯೂಸ್ ಇರುತ್ತವೆ. ಇಂತಹ ಪರಿಸ್ಥಿತಿಯಲ್ಲಿ ಅವರೆಲ್ಲಾ ರೂಲ್ಸ್ ಫಾಲೋ ಮಾಡಿಲ್ಲವೆಂದರೆ ಈ ಆಬ್ಲಿಗೇಷನ್ಸ್ ಯಾರು ಕೊಡುತ್ತಾರೆ? ಕೈಗಾರಿಕೆ ಬಂದ್ ಮಾಡಿ ಹೋಗಿ ಎಂದರೆ ಕಾರ್ಮಿಕರಿಗೆ ಪೇಮೆಂಟ್ ಯಾರು ಕೊಡುತ್ತಾರೆ? ಸೇಲ್ಸ್ ಟ್ಯಾಕ್ಸ್, ಇನ್‌ಕಮ್ ಟ್ಯಾಕ್ಸ್ ಯಾರು ಕೊಡುತ್ತಾರೆ? ಹಾಗಾಗಿ ಆ ತರಹ ವ್ಯವಸ್ಥೆ ಮಾಡುವುದು ಬಹಳ ಕಷ್ಟವಾಗುತ್ತದೆ.

ಶ್ರೀ ಶಿವಾನಂದ ಎಸ್ ಪಾಟೀಲ್ : ಸನ್ಮಾನ್ಯ ಸಚಿವರಲ್ಲಿ ಹೋದ ಸಾರಿ ಇದೇ ವಿಷಯ ಕುರಿತಂತೆ ಒಂದು ಪ್ರಶ್ನೆಯನ್ನು ಕೇಳಿದ್ದೆನು. ಕೆಲವು ಶುಗರ್ ಫ್ಯಾಕ್ಟರಿ ಪರ್ಮಿಷನ್ಸ್ ಬಗ್ಗೆ, ಸಿಂಗಲ್ ವಿಂಡೊ ಕ್ಲಿಯರೆನ್ಸ್ ಸಲುವಾಗಿ ಎಷ್ಟು ಶುಗರ್ ಫ್ಯಾಕ್ಟರಿ ಪರ್ಮಿಷನ್ಸ್ ಇನ್ನೂ ಪೆಂಡಿಂಗ್ ಇವೆ. ಶುಗರ್ ಫ್ಯಾಕ್ಟರಿ ಪರ್ಮಿಷನ್ ನೀಡಲಿಕ್ಕೆ ನಿಮ್ಮ ಪಾಲಿಸಿ ಫಾರ್ಮೇಷನ್ ಒಂದು ವರ್ಷ ಮುಗಿದು ಹೋಯಿತು. ಡಿಸೀಷನ್ ಪಾಲಿಸಿ ಹೊರಗೆ *** ಇರುವರೆಗೆ ನೀವು ಡಿಸೀಷನ್ ತೆಗೆದುಕೊಳ್ಳುತ್ತಿಲ್ಲ ನೀವು ಬಿಲ್ಲನ್ನು ಇಂಟ್ರಡ್ಯೂಸ್ ಮಾಡಿ ಆಯಿತು. 35 ದಿವಸಗಳಲ್ಲಿ ಅದು ಕ್ಲಿಯರ್ ಆದ ಹಾಗೋ ಅಥವಾ ಶುಗರ್ ಇಂಡಸ್ಟ್ರಿ ಪಾಲಿಸಿ ಬಿರುವವರೆಗೆ ಅದು ಕ್ಲಿಯರ್ ಆಗದ ಹಾಗೋ, ನನಗೆ ಸ್ವಲ್ಪ ಎನ್‌ಲೈಟನ್ ಮಾಡಿ.

*** ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಆರ್.ವಿ. ದೇಶಪಾಂಡೆ : ಇವರು ಚೀಫ್ ಸೆಕ್ರೆಟರಿ ಬಗ್ಗೆ ಹೇಳಿದ್ದಾರೆ. That is not correct. It should no go an record. ಚೀಫ್ ಸೆಕ್ರೆಟರಿ ಡಿಫರೆಂಟ್ ಪೊಸಿಷನ್. He is the head of bureaucracy. ಹಾಗಾಗಿ ಚೀಫ್ ಸೆಕ್ರೆಟರಿ ರಿಟೈರ್ಡ್ ಆದ ಮೇಲೆ ಏನು ಮಾಡುತ್ತಾರೆ, ಎಂಬ ಪ್ರಶ್ನೆ ನಮ್ಮ ಮುಂದೆ ಇಲ್ಲಿ ಇಲ್ಲ. ಹಾಗಾಗಿ ಅದು ಸರಿಯಲ್ಲ. I request that it should not go on record. ಅವರ ಪ್ರಶ್ನೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೆಲವು ಸಕ್ಕರೆ ಕಾರ್ಖಾನೆಗಳು ಸಿಂಗಲ್ ವಿಂಡೋ ಏಜೆನ್ಸಿ ಮುಂದೆ ಬಂದಾಗ ನಾವು ನಿರ್ಣಯವನ್ನು ತೆಗೆದುಕೊಂಡಿರುವುದು ನಿಜ. ಈಗಾಗಲೇ ವಿರೋಧ ಪಕ್ಷದ ನಾಯಕರು ಆ ಪ್ರಶ್ನೆಯನ್ನು ಕೇಳಿದಾಗ ಉತ್ತರವನ್ನು ಕೊಟ್ಟಿದ್ದೇನೆ. ಒಂದೂವರೆ ವರ್ಷದ ಹಿಂದೆ ಈ ಶುಗರ್ ಫ್ಯಾಕ್ಟರಿ ಪಪೋಸಲ್ಸ್ ಹೆಚ್ಚು ಬಂದಾಗ ಎಕ್ಸಿಸ್ಟಿಂಗ್ ಶುಗರ್ ಫ್ಯಾಕ್ಟರಿಗೆ ಹೆಚ್ಚು ಸಪೋರ್ಟ್ ಮಾಡಬೇಕು. ಏಕೆಂದರೆ ನಾಳೆ ಕಾಸ್ಟ್ ಎಫ್‌ಕ್ಟೀವ್ ಆಗುವಾಗ ಅವರಿಗೆ ನಾವು ಕೇನ್ ಏರಿಯಾಸ್ ಕೊಡಬೇಕು. ಹೊಸ ಫ್ಯಾಕ್ಟರಿ ವಿಷಯ ಬಂದಾಗ ಮುಖ್ಯವಾಗಿ, ಮಂಡ್ಯ, ಬೆಳಗಾಂ, ಬಿಜಾಪುರ ಜಿಲ್ಲೆಯಲ್ಲಿ there were large number of proposals. ಹಾಗಾಗಿ ಎಲ್ಲರಿಗೂ ಕ್ಲಿಯರೆನ್ಸ್ ಕೊಟ್ಟರೆ ನಾಳೆ ಶುಗರ್‌ಕೇನ್ ಇಲ್ಲದಿದ್ದರೆ ನೀವೇನು ಮಾಡುತ್ತೀರಿ. ಆ ಪ್ರಶ್ನೆ ಬಂದಾಗ ಆಗಿನ ಪ್ರಿನ್ಸಿಪಲ್ ಸೆಕ್ರೆಟರಿ, ಈಗಿನ ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ನಾವು ಒಂದು ರಿಪೋರ್ಟ್ ಕೊಡಬೇಕೆಂದು ಆದೇಶ ಮಾಡಿದ್ದೇವೆ. ಆ ರಿಪೋರ್ಟ್ ಬಂದಿದೆ ಈ ತಿಂಗಳು ಶುಗರ್ ಮಿನಿಸ್ಟರ್ ಆದಷ್ಟು ಬೇಗನೆ ಒಂದು ನಿರ್ಣಯ ಮಾಡುವುದಾಗಿ ತಿಳಿಸಿದ್ದಾರೆ. ಆ ನಿರ್ಣಯ 4–5 ದಿವಸದಲ್ಲಿ ಬರಬಹುದು. ಆದಾದನಂತರ ತಕ್ಷಣ ಏನು ಪೆಂಡಿಂಗ್ ಪ್ರಪೋಸಲ್ಸ್ ಇವೆ, ಅದನ್ನು ಹೈ ಪವರ್ ಕಮಿಟಿ ಅಥವಾ ಸಿಂಗಲ್ ವಿಂಡೋ ಏಜೆನ್ಸಿ ಮುಂದೆ ತೆಗೆದುಕೊಂಡು ಅದಕ್ಕೆ ನ್ಯಾಯಬದ್ಧವಾಗಿ ಕ್ರಮ ತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ನೀವು ಬಿಲ್ ತಂದಿದ್ದೀರಿ, ಅದು 35 ದಿವಸದಲ್ಲಿ ನಿಮ್ಮ ಸಿಂಗಲ್ ವಿಂಡೋ ಏಜೆನ್ಸಿಯಿಂದ "deemed to be cleared" ಅಂತ ಹೇಳಿದೆ. Whether this is applicable to these pending applications or not?

ಶ್ರೀ ಆರ್.ವಿ. ದೇಶಪಾಂಡೆ : ನಾವು ಯಾವುದೇ ಶುಗರ್ ಫ್ಯಾಕ್ಟರಿಯ ಪ್ರಪೋಸಲ್ಸ್ ಅನ್ನು ಕ್ಲಿಯರ್ ಮಾಡಬಾರದೆಂದು ಹೈಪವರ್ ಕಮಿಟಿಯಲ್ಲಿ ಡಿಸೀಷನ್ ಆಗಿದೆ. ಒಂದು ವರ್ಷದ ಹಿಂದೆಯೇ ಡಿಸೀಷನ್ ಆಗಿದೆ.

Sri Shivananda .S Patil : What is the sanctity of that Bill?

ಶ್ರೀ ಆರ್.ವಿ. ದೇಶಪಾಂಡೆ : ಇನ್‌ವೆಸ್ಟ್‌ಮೆಂಟ್ ಬೇಡವೆಂದಲ್ಲ. ಶುಗರ್ ಮಿನಿಸ್ಟರ್ ನನಗೆ ಹೇಳಿದ್ದಾರೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಆ ಬಿಲ್ಲಿನ ಸ್ಕಾಂಕಿಟ್ಟಿ ಬಗ್ಗೆ ಕೇಳುತ್ತಿದ್ದೇನೆ. ಇನ್‌ವೆಸ್ಟ್‌ಮೆಂಟ್ ಬಗ್ಗೆ ಕೇಳುತ್ತಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಆ ಬಿಲ್ ಇನ್ನೂ ಇಂಪ್ಲಿಮೆಂಟ್ ಆಗಿಲ್ಲವಲ್ಲಾ, ನಿನ್ನೆ ಮೊನ್ನೆ ಬಿಲ್ ಪಾಸ್ ಮಾಡಿದ್ದೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಬಿಲ್ ಪಾಸ್ ಆದ ಮೇಲೆ ಇಂಪ್ಲಿಮೆಂಟ್ ಆದ ಹಾಗೆ ಅಲ್ಲವೇ?

ಶ್ರೀ ಆರ್.ವಿ. ದೇಶಪಾಂಡೆ : ಅದು ಗವರ್ನರ್‌ಗೆ ಹೋಗಬೇಕು. ಅದಕ್ಕೆ ಪ್ರೆಸಿಡೆಂಟಿರಾರಿಂದ ಅಸೆಂಟ್ ಬರಬೇಕು.

ಶ್ರೀ ಶಿವಾನಂದ ಎಸ್ ಪಾಟೀಲ್ : ಗವರ್ನರ್‌ರವರಿಂದ ಅಸೆಂಟ್ ಸಹ ಸಿಕ್ಕಿದೆ. ಇದು ಬಹಳ ಮುಖ್ಯವಾದ ಪ್ರಶ್ನೆ. ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಹದೇವ್ : ಈಗ ಅವರು ಮೂಲಭೂತ ಪ್ರಶ್ನೆಯನ್ನು ಎತ್ತಿದ್ದಾರೆ. ಕೆಲವು ಶುಗರ್ ಫ್ಯಾಕ್ಟರಿಗಳು ನಷ್ಟದಲ್ಲಿ ನಡೆಯುತ್ತಿವೆ. ಕೆಲವು ಲಾಭದಲ್ಲಿವೆ ನಾವು ಈಗ ಹೊಸ ಶುಗರ್ ಫ್ಯಾಕ್ಟರಿಗಳಿಗೆ ಪರ್ಮಿಷನ್ ಕೊಟ್ಟರೆ ಏನು ಪರಿಸ್ಥಿತಿಯಾಗುತ್ತದೆ ನಮ್ಮ ನಿಯಮದ ಪ್ರಕಾರ ಏರಿಯಾಗಳನ್ನು ಅಲಾಟ್ ಮಾಡಬೇಕಾಗುತ್ತದೆ. ಯಾವ್ಯಾವ ಫ್ಯಾಕ್ಟರಿಗಳಿಗೆ ಎಷ್ಟೆಷ್ಟು ಏರಿಯಾ ಕೊಡಬೇಕೆಂದು ನೋಡಬೆಕು. ಈಗ ಎಕ್ಸಿಸ್ಟಿಂಗ್ ಇರುವ ಫ್ಯಾಕ್ಟರಿಗಳಿಗೆ ಏನು ಎಫೆಕ್ಟ್ ಆಗುತ್ತವೆ. ಇವನ್ನೆಲ್ಲಾ ನಾವು ಕನ್ಸಿಡರ್ ಮಾಡಬೇಕಾಗುತ್ತದೆ. ಕೆಲವು ಶುಗರ್ ಫ್ಯಾಕ್ಟರಿಗಳು ಈಗಾಗಲೇ ನಮ್ಮ ನಿಯಮಗಳನ್ನು ಗಣನೆಗೆ ತೆಗೆದುಕೊಳ್ಳದೆ ನಡೆಯುತ್ತಿವೆ. ಇದು ಅವರಿಗೂ ಗೊತ್ತಿದೆ. ಆದರೆ ನಾವು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಂಡು ಬಿಟ್ಟರೆ ಅವುಗಳನ್ನು ಮುಚ್ಚಿಸಬೇಕಾಗುತ್ತದೆ. ಆದ್ದರಿಂದ ಅವರಿಗೆ ತೊಂದರೆಯಾಗಬಾರದು ಎನ್ನುವ ಉದ್ದೇಶದಿಂದ, ಈಗಾಗಲೇ ಮಾನ್ಯ ದೇಶಪಾಂಡೆಯವರು ಹೇಳಿದ್ದಾರೆ. ಇನ್ನೊಂದು ವಾರದಲ್ಲಿ ಇರತಕ್ಕಂಥ ಫೈಲ್‌ಗಳನ್ನೆಲ್ಲಾ ಕ್ಲಿಯರ್ ಮಾಡಿ ಅದನ್ನು ನಾವು ಮಾಡಿಕೊಡುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ನಿಯಮಗಳ ಉಲ್ಲಂಘನೆ ಬಗ್ಗೆ ಹೇಳಿದಿರಿ. ನಿಮ್ಮ ಎಂಪವರ್ ಕಮಿಟಿಯೇ ನಿಯಮಗಳನ್ನು ಉಲ್ಲಂಘನೆ ಮಾಡಿದೆ. ಇದು ನಿಮಗೆ ಗೊತ್ತಿದೆಯಾ? ಅದಕ್ಕೆ ನಾನು ಚರ್ಚೆಗೆ ಹೋಗಬಾರದು ಎಂದು ಹೇಳುತ್ತಿದ್ದೇನೆ. ಇದು ಮಾನ್ಯ ದೇಶಪಾಂಡೆಯವರಿಗೆ ಗೊತ್ತಿದೆ. ಇದರಲ್ಲಿ ನಿಮ್ಮ ಪೊಲಿಟಿಕಲ್ ಇಂಟರೆಸ್ಟ್ ಪ್ರಿವೇಲ್ ಆಗ್ತಿದೆ ಎಂದರೆ ನೀವು ಮಾಡಿ. ಇವತ್ತು ನೀವು ಮಾಡಬಹುದು. ನಾಳೆ ನಾವು ಮಾಡಬಹುದು. ಆ ತರಹ ನೀವು.....

ಶ್ರೀ ಎಂ. ಮಹದೇವ್ : ನನ್ನದು ಒಂದು ಮಾತು ಕೇಳಿ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಮಹದೇವ್‌ರವರೇ, ಒಂದು ನಿಮಿಷ ನಾನು ಹೇಳುತ್ತೇನೆ. IIM, Government of Indiaಗೆ ಕೊಟ್ಟ ಮೇಲೆ Have we have any authority to prevent it?

ಶ್ರೀ ಜಗದೀಶ್ ಶೆಟ್ಟರ್ : ಲಾಸ್ಟ್‌ಟೈಮ್ ನಾನು ಕೇಳಿದಾಗಲೂ ನೀವು ಹೇಳಿದ್ದೀರಿ. ಈ ಸದನದಲ್ಲಿ ಚರ್ಚೆಯಾದಾಗಲೂ ನೀವು ಹೇಳಿದ್ದೀರಿ. ಕೇವಲ ರಾಜಕೀಯ ಹಿತಾಸಕ್ತಿ ಮೇಲೆ ತೀರ್ಮಾನವನ್ನು ತೆಗೆದುಕೊಳ್ಳಬೇಡಿ. ನಾವು ಇವತ್ತು ಏನು ಹೇಳುತ್ತಿದ್ದೇವೆ, ಅದನ್ನೇ ನೀವು ಮಾಡುತ್ತಿದೀರಿ.

ಶ್ರೀ ಆರ್.ವಿ. ದೇಶಪಾಂಡೆ : ವಿರೋಧ ಪಕ್ಷದ ನಾಯಕರೇ, ನಾನು ನಿಮಗೆ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಇನ್ವೆಸ್ಟ್‌ಮೆಂಟ್‌ಗೆ ಜಾತಿನೂ ಇಲ್ಲ, ಧರ್ಮನೂ ಇಲ್ಲ, ಪಕ್ಷವೂ ಇಲ್ಲ, ನಾವು ಒಂದು ತೀರ್ಮಾನವನ್ನು ತೆಗೆದುಕೊಂಡಾಗ ಶುಗರ್ ಫ್ಯಾಕ್ಟರಿಗಳು ಓವರ್‌ಲ್ಯಾಪ್ ಆಗುತ್ತಿವೆ. ಶುಗರ್‌ಕೇನ್ ಏರಿಯಾ ಕಡಿಮೆ ಇದೆ. ಶುಗರ್ ಫ್ಯಾಕ್ಟರಿಗಳು ಹೆಚ್ಚಾದರೆ ಎಕ್ಸಿಸ್ಟಿಂಗ್ ಶುಗರ್ ಫ್ಯಾಕ್ಟರಿಗಳು

ಏನಾಗಬಹುದು? ಇದರ ಬಗ್ಗೆ ಒಳ್ಳೆಯ ಮನಸ್ಸಿನಿಂದ ಚಿಂತನೆ ಮಾಡುವುದಕ್ಕೆ ಒಂದು ಸಮಿತಿಯನ್ನು ಮಾಡಿದ್ದೇವೆ. ಅದರ ವರದಿ ಬಂದಿದೆ. ವಿಳಂಬ ಆಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೆಲವು ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುವುದಕ್ಕೆ ವಿಳಂಬವಾಗಿದೆ. ಅದರಿಂದ ಕಾಸ್ಟ್ ಎಸ್ಕಲೇಟ್ ಆಗಿ ಪ್ರಮೋಟರ್ಸ್‌ಗೆ ತೊಂದರೆಯೂ ಆಗಲಿಕ್ಕೆ ಸಾಧ್ಯ. ಅದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ನಾನು ಏನು ಹೇಳುತ್ತಿದ್ದೇನೆ ಎಂದರೆ ಇನ್ನು ಒಂದು ವಾರದಲ್ಲಿ ಅವರು ರಿಪೋರ್ಟ್ ಕೊಡುತ್ತೇವೆ ಎಂದು ಹೇಳಿದ್ದಾರೆ. ಆ ರಿಪೋರ್ಟ್ ಬಂದತಕ್ಷನ ಸಿಂಗಲ್ ವಿಂಡೋ ಎಜೆನ್ಸಿ – ಈ ಹೈಪವರ್ ಕಮಿಟಿ ಮುಂದೆ ಈ ಪ್ರಾಜೆಕ್ಟ್‌ನ್ನು ಇಟ್ಟು ಏನು ನ್ಯಾಯಬದ್ಧವಾಗಿ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ ಎಂದು ನಿಮಗೆ ಹೇಳುತ್ತಿದ್ದೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಬಿಜಾಪುರ ಜಿಲ್ಲೆಯಲ್ಲಿ ಒಂದೂ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಸರ್ಕಾರದವರು ಇದನ್ನು ಅವಯ್ಡ್ ಮಾಡುತ್ತಿದ್ದಾರೆ. ಪ್ರತಿಸಲವೂ ಹೀಗೆಯೇ ಹೇಳುತ್ತಿದ್ದೀರಿ.

ಉಪಾಧ್ಯಕ್ಷರು : ಇದನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ. ಪ್ರಶ್ನೋತ್ತರದಲ್ಲಿ ಹೀಗೆ ಅರ್ಧ ಗಂಟೆ ಮಾತನಾಡಿದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ಬೇರೆ ರೂಪದಲ್ಲಿ ಇದು ಬರುವುದಿಲ್ಲ.

ಶ್ರೀ ಎಂ. ಮಹದೇವ್ : ಈಗ ಮಾನ್ಯ ದೇಶಪಾಂಡೆಯವರು ಹೇಳಿದ್ದಾರೆ ಮತ್ತು ನಾನೂ ಕೂಡ ಹೇಳಿದ್ದೇನೆ. ಈ ಸದನದಲ್ಲಿ ಪ್ರಾಮಿಸ್ ಮಾಡಿದ್ದೇವೆ. ಒಂದು ವಾರದಲ್ಲಿ ಎಲ್ಲಾ ಕ್ಲಿಯರ್ ಮಾಡಿಕೊಡುತ್ತೇನೆ ಎಂದು ಹೇಳಿದ ಮೇಲೂ ಮತ್ತೆ ಮತ್ತೆ ಪ್ರಶ್ನೆ ಹಾಕಿದರೆ ನಾನು ಏನು ಹೇಳುವುದು?

ಉಪಾಧ್ಯಕ್ಷರು : ಅಷ್ಟೇ, ಸ್ಪಷ್ಟವಾದ ಉತ್ತರ ಅವರಿಗೆ ಬೇಕಾಗಿದೆ. ಒಂದು ವಾರದಲ್ಲಿ ಕ್ಲಿಯರ್ ಮಾಡಿಕೊಡುತ್ತೇವೆ ಎನ್ನುವಂಥ ಸ್ಪಷ್ಟವಾದ ಉತ್ತರ ಅವರಿಗೆ ಬೇಕಾಗಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಒಂದೂವರೆ ವರ್ಷವಾಯಿತು.....

ಶ್ರೀ ಸಿ.ಎಸ್. ನಾಡಗೌಡ : ಮಂತ್ರಿಗಳು ಆಶ್ವಾಸನೆ ಕೊಟ್ಟಮೇಲೂ ಪದೇ ಪದೇ ಅದರ ಮೇಲೆ ಚರ್ಚೆ ಮಾಡಿಕೊಳ್ಳುತ್ತಾ ಹೋದರೆ ಹೇಗೆ? ಇದು ಪ್ರಶ್ನೋತ್ತರ ವೇಳೆ.

ಉಪಾಧ್ಯಕ್ಷರು : ಮಂತ್ರಿಗಳು ಭರವಸೆ ಕೊಟ್ಟ ಮೇಲೆ ಪುನಃ ಏಕೆ ಕೇಳುತ್ತಿದ್ದೀರಿ?

ಶ್ರೀ ಆರ್.ವಿ. ದೇಶಪಾಂಡೆ : ಈ ಸದನದಲ್ಲೇ ಶುಗರ್ ಫ್ಯಾಕ್ಟರೀಸ್‌ಗಳ ಪ್ರಪೋಸಲ್ಸ್ ಕ್ಲಿಯರ್ ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ಕದಿಯುವುದಕ್ಕಾಗುವುದಿಲ್ಲ. ಅದಕ್ಕೆ ಒಂದು ಪದ್ಧತಿ ಇದೆ. Single window agency is headed by Principal Secretary. ಐವತ್ತು ಕೋಟಿ ರೂ. ತನಕ ಪ್ರಪೋಸಲ್ಸ್ ಅವರು ಕ್ಲಿಯರ್ ಮಾಡುತ್ತಾರೆ. High Power Committee is headed by the Chief Ministe. ಹಾಗಾಗಿ ನಾನು ಹೇಳಿದ್ದೇನೆ. ವಿಳಂಬ ಆಗಿದೆ ಎಂದು ನಾನು ಒಪ್ಪಿಕೊಂಡಿದ್ದೇನೆ. ನಾವೇನೂ ಇಲ್ಲಿ ಫಾಲ್ಸ್ ಪ್ರೆಸ್ಟೀಜ್ ಮೇಲೆ ಇಲ್ಲಿ ಕುಳಿತಿಲ್ಲ. ಮಂತ್ರಿಗಳು ಈಗಾಗಲೇ ಹೇಳಿದ್ದಾರೆ ಒಂದು ವಾರದಲ್ಲಿ ಕ್ಲಿಯರ್ ಮಾಡಿಕೊಡುತ್ತೇನೆ ಎಂದು ಅದಾದ ನಂತರ ತಕ್ಷಣ -- on priority we will take all the proposals to High Power Committee and try to clear that.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ....

ಉಪಾಧ್ಯಕ್ಷರು : ಎಷ್ಟು ಪ್ರಶ್ನೆಗಳನ್ನು ಕೇಳುತ್ತೀರಿ?

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ನೋಡಿ. ಉತ್ತರ ತಪ್ಪು ಇದೆ. ಬಿಜಾಪುರ ಜಿಲ್ಲೆಯಲ್ಲಿ ಒಂದೂ ಶುಗರ್ ಫ್ಯಾಕ್ಟರಿ ಕೂಡ ಇಲ್ಲ. This, you are going to admit or not?

ಉಪಾಧ್ಯಕ್ಷರು : ಒಂದು ವಾರದಲ್ಲಿ ಕ್ಲಿಯರ್ ಮಾಡಿಕೊಡುತ್ತೇನೆ ಎಂದು ಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಇದು ಎನಾಗಿದೆ ಎಂದರೆ ಪ್ರತಿಸಲವೂ ಇದನ್ನು ಅವಾಯ್ಡ್ ಮಾಡುತ್ತಿದ್ದಾರೆ. ನಾನು ನೇರವಾಗಿ ಆಪಾದನೆ ಮಾಡುತ್ತಿದ್ದೇನೆ. ಕೇವಲ ರಾಜಕೀಯ ಹಿತಾಸಕ್ತಿ ಸಲುವಾಗಿ ಇದನ್ನು ನೀವು ಪೆಂಡಿಂಗ್ ಇಡುತ್ತಿದ್ದೀರಿ.

ಶ್ರೀ ಆರ್.ವಿ. ದೇಶಪಾಂಡೆ : ಅವರು ಈ ರೀತಿ ಆಪಾದನೆ ಮಾಡಿದರೆ ಹೇಗೆ? ಅವರು ಕೇಳಿದ್ದಕ್ಕೆ ಸರಿಯಾದ ಜವಾಬು ಕೂಡ ಹೇಳಿದ್ದೇನೆ. ಆದರೆ ಈ ಪ್ರಕಾರ ವಿರೋಧ ಪಕ್ಷದ ನಾಯಕರು ಆರೋಪ ಮಾಡಿದರೆ – then I will have my own way. The Government will decide in its own way. I am not going to oblige him.

(ಗೊಂದಲ)

ಶ್ರೀ ಎಂ. ಮಹದೇವ್ : ರಾಜಕೀಯ ಹಿತಾಸಕ್ತಿ ಇದ್ದರೆ; ನಮಗೂ ರಾಜಕೀಯ ಮಾಡುವುದಕ್ಕೆ ಬರುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಅದನ್ನೇ ಮಾಡುವುದಕ್ಕೆ ಈಗ ಹತ್ತಿದ್ದೀರಿ. ಒಂದು ವರ್ಷದಿಂದ ಅದೇ ಆಯಿತು.

ಶ್ರೀ ಎಂ. ಮಹದೇವ್ : ನಮಗೆ ಎಲ್ಲರಿಗೂ ಸಹಾಯ ಮಾಡಬೇಕೆಂದು ಇದೆ.

ಉಪಾಧ್ಯಕ್ಷರು : ಆಯಿತು. ಮುಂದಿನ ಪ್ರಶ್ನೆ (ಸಂಖ್ಯೆ: 5373) ಮಾನ್ಯ ಅಂಗಾರ ಅವರದ್ದು ಸಮಾಜ ಕಲ್ಯಾಣ ಇಲಾಖೆಯಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆಗೆ ವರ್ಗಾಯಿಸಲಾಗಿದೆ.

ಜವಳಿ ಉದ್ಯಮದ ಪುನರುಜ್ಜೀವನದ ಬಗ್ಗೆ

626 (5366) : ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಆಮದು ರೇಷ್ಮೆ ಮತ್ತು ಜವಳಿ ಇಂದಾಗಿ ಸ್ಥಳೀಯ ಜವಳಿ ಉದ್ದಿಮೆಗೆ ಪೆಟ್ಟು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ರೇಷ್ಮೆ ಮತ್ತು ಜವಳಿ ಉದ್ದಿಮೆಯನ್ನು ಪುನರುಜ್ಜೀವನಗೊಳಿಸಿ ಹಿಂದಿನ ಜನಪ್ರಿಯತೆಯನ್ನು ಗಳಿಸಿಕೊಳ್ಳಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಇ) ರೇಷ್ಮೆ ಮತ್ತು ಜವಳಿ ನೇಕಾರರು ಗುಳೆ ಹೋಗುತ್ತಿರುವ ಪರ್ಯಾಯ ವ್ಯವಸ್ಥೆ ಕಂಡುಕೊಳ್ಳುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?